MARCH 03, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಇಸ್ರೇಲ್–ಇರಾನ್ ಸೇರಿದಂತೆ, ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳಲ್ಲಿ, ಯುದ್ಧ ಸದೃಷ ಸಂಘರ್ಷದ ಹಿನ್ನೆಲೆ, ಮೊಟಕು ಗೊಳಿಸಲಾಗಿದ್ದ, ನಾಗರಿಕ ವಿಮಾನಯಾನ ಸೇವೆಯನ್ನು, ಪುನಾರಂಭಿಸಲಾಗಿದೆ. ಆದರೆ ಮುಂದುವರಿಕೆ, ಪರಿಸ್ಥಿತಿ ಸುಧಾರಣೆ ಅವಲಂಬಿಸಿದೆ.

<><><>

ಅಬುಧಾಬಿಯಲ್ಲಿ ಸಿಲುಕಿದ್ದ, 100ಕ್ಕೂ ಅಧಿಕ ಕನ್ನಡಿಗರು, ನಿನ್ನೆ ರಾತ್ರಿ 10 ಗಂಟೆಗೆ, ಸುರಕ್ಷಿತವಾಗಿ, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದಾರೆ.

<><><>

ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದು, ವಿಶೇಷ ವಿಮಾನದ ಮೂಲಕ, ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳಿಂದ, ಎಲ್ಲ ಕನ್ನಡಿಗರನ್ನು ಸ್ವದೇಶಕ್ಕೆ ಮರಳಿ ಕರೆ ತರಲು, ಕೋರಿದ್ದಾರೆ.

<><><>

ಕೊಪ್ಪಳ ತಾಲೂಕು, ಬಹದ್ದೂರ ಬಂಡಿ ಗ್ರಾಮದಲ್ಲಿ, ರಾಷ್ಟ್ರೀಯ ಬಂಜಾರಾ ಹೋಳಿ ಉತ್ಸವದ ನಿಮಿತ್ತ, ಬಂಜಾರಾ ಸಮುದಾಯದ ಕಲಾವಿದರು, ಸಾಂಪ್ರದಾಯಿಕ ನೃತ್ಯ ಪ್ರದರ್ಶಿಸಿದರು.

<><><>

ಚಂದ್ರ ಗ್ರಹಣದ ಹಿನ್ನೆಲೆ, ನಾಡಿನ ವಿವಿಧೆಡೆ, ಕಾಮದೇವ ಹಾಗೂ ರತಿ ದೇವಿಯರ ಮೂರ್ತಿಗಳ, ಸಾರ್ವಜನಿಕ ಪ್ರಾಣ ಪ್ರತಿಷ್ಠಾಪನೆ, ನಾಳೆ ಬೆಳಗಿನ ಜಾವ ನಡೆಯಲಿದೆ. ನಾಳೆಯಿಂದ ಐದು ದಿನಗಳ ಕಾಲ, ರಂಗ ಪಂಚಮಿ ಹಿನ್ನೆಲೆ, ಬಣ್ಣದ ಓಕುಳಿ ಹಬ್ಬ ಆಯೋಜಿತವಾಗಿದೆ.

<><><>

ಧಾರವಾಡದಲ್ಲಿ ನಾಳೆ ಹಾಗೂ ಹುಬ್ಬಳ್ಳಿಯ ವಿವಿಧ ಬಡಾವಣೆಗಳಲ್ಲಿ, ಮುಂದಿನ ಐದು ದಿನಗಳ ವರೆಗೆ, ಬಣ್ಣದ ಓಕುಳಿ ನಡೆಯಲಿದೆ.

<><><>

ಬಿರು ಬಿಸಿಲಿನ ಹಿನ್ನೆಲೆ, ನೆರಳಿನಲ್ಲಿ ಪರಿಸರ ಸ್ನೇಹಿ ಬಣ್ಣಗಳೊಂದಿಗೆ ಓಕುಳಿ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ನೀರು, ಹಣ್ಣಿನ ರಸ, ತಂಪು ಪಾನೀಯ ಸೇವಿಸುವಂತೆ ಹಾಗೂ ನಿರ್ಜಲೀಕರಣದಿಂದ ಬಳಲದಂತೆ, ವೈದ್ಯರು ಸಲಹೆ ನೀಡಿದ್ದಾರೆ.

<><><>

ಚರ್ಮ ವಾದ್ಯಗಳ ಇತಿಹಾಸ, ಪರಂಪರೆ ಮತ್ತು ಸಂಸ್ಕೃತಿಯನ್ನು ತಿಳಿಸಲು, ನಾಡಿದ್ದು 5ನೇ ತಾರೀಖು, ಬೆಳಗ್ಗೆ 11 ಗಂಟೆಗೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ದುರ್ಗದಬೈಲ, ಕೊಪ್ಪಿಕರ ರಸ್ತೆ, ಸರ್ ಸಿದ್ದಪ್ಪ ಕಂಬ್ಳಿ ರಸ್ತೆ ಮೂಲಕ, ಜಗ್ಗಲಗಿ ಮೇಳ, ನಡೆಯಲಿದೆ ಎಂದು, ದಲಿತ ಕಾರ್ಮಿಕರ ಅಸಂಘಟಿತ ಒಕ್ಕೂಟದ ಅಧ್ಯಕ್ಷ, ವಿಜಯ ಕರ್ರಾ ತಿಳಿಸಿದ್ದಾರೆ.

<><><>

ಹುಬ್ಬಳ್ಳಿ ಜಗ್ಗಲಗಿ ಸಮಿತಿ ಲಾಂಛನವನ್ನು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ, ಹುಬ್ಬಳ್ಳಿಯ ತಮ್ಮ ಗೃಹ ಕಚೇರಿಯಲ್ಲಿ, ಬಿಡುಗಡೆ ಮಾಡಿದರು.

<><><>

ಪದ್ಮಭೂಷಣ, ಪಂಡಿತ ಪುಟ್ಟರಾಜ ಗವಾಯಿಗಳ, 115ನೇ ಜನ್ಮ ದಿನೋತ್ಸವ ಇಂದು.

ಪುಟ್ಟರಾಜ ಗವಾಯಿ ಪ್ರತಿಷ್ಠಾನ, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಸವಾಯಿ ಗಂಧರ್ವ ಸಭಾ ಭವನದಲ್ಲಿ, ಇಂದು ಸಂಜೆ 5.30ಕ್ಕೆ, ಪುಟ್ಟರಾಜ ಸಮ್ಮಾನ್ ರಾಷ್ಟ್ರೀಯ ಪುರಸ್ಕಾರ ಪ್ರದಾನ ಹಾಗೂ ಸಂಗೀತೋತ್ಸವ ಆಯೋಜಿಸಿದೆ. ಹೆಸರಾಂತ, ಹಿಂದೂಸ್ಥಾನಿ ಶಾಸ್ತ್ರೀಯ ಪಿಟೀಲು ವಾದಕ, ಪಂಡಿತ ಬಿ.ಎಸ್. ಮಠ ಅವರಿಗೆ, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ, ಪುಟ್ಟರಾಜ ಸಮ್ಮಾನ್ ರಾಷ್ಟ್ರೀಯ ಪುರಸ್ಕಾರ ಪ್ರದಾನಿಸಿ, ಗೌರವಿಸಲಿದ್ದಾರೆ. ಪ್ರಶಸ್ತಿ, 1 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆ, ಒಳಗೊಂಡಿದೆ. ಸಭಾ ಕಾರ್ಯಕ್ರಮದ ಬಳಿಕ, ಪಂಡಿತ ಬಿ.ಎಸ್.ಮಠ, ವಿದುಷಿ ಅಕ್ಕಮಹಾದೇವಿ ಮಠ ಹಾಗೂ ವೀಣಾ ದಂಡಾವತಿ ಮಠ ಅವರಿಂದ, ವಯೋಲಿನ್ ವಾದನ ಕಛೇರಿ ನಡೆಯಲಿದೆ.

<><><>

ಪಂಡಿತ ಬಿ.ಎಸ್. ಮಠ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಬಿ.ಎಸ್. ಮಠ ಧ್ವನಿ 35 ಸೆಕೆಂಡುಗಳು

<><><>

ವನ್ಯಜೀವಿ ಉಳಿಸಿ; ಭವಿಷ್ಯವನ್ನು ರಕ್ಷಿಸಿ, ಎಂದು, ಅರಣ್ಯ ಖಾತೆ ಸಚಿವ, ಈಶ್ವರ ಖಂಡ್ರೆ, ವಿಶ್ವ ವನ್ಯಜೀವಿ ದಿನದ ಶುಭಾಶಯ ಕೋರಿದ್ದು, ವನ್ಯಜೀವಿಗಳು ಪ್ರಕೃತಿಯ ಅಮೂಲ್ಯ ಸಂಪತ್ತಾಗಿದ್ದು, ಭವಿಷ್ಯದ ಪೀಳಿಗೆಗಾಗಿ ಹಸಿರು ಭೂಮಿಯನ್ನು ಉಳಿಸೋಣ, ಎಂದಿದ್ದಾರೆ.

'ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯಗಳು; ಆರೋಗ್ಯ, ಪರಂಪರೆ ಮತ್ತು ಜೀವನೋಪಾಯಗಳ ಸಂರಕ್ಷಣೆ' ಎಂಬ ಧ್ಯೇಯದೊಂದಿಗೆ, ಹುಲಿ ಸಂರಕ್ಷಣಾ ಯೋಜನೆ, ಪ್ರೊಜೆಕ್ಟ್ ಚೀತಾ ಹಾಗೂ ಡಾಲ್ಫಿನ್ ಸಂರಕ್ಷಣಾ ಯೋಜನೆಗಳ ಮೂಲಕ, ಧ್ವನಿಸಲಾಗುತ್ತಿದೆ.

<><><>

ಇಂದು, ವಿಶ್ವ ಶ್ರವಣ ದಿನ. ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ಎಕ್ಸ್ ಮಾಧ್ಯಮದಲ್ಲಿ, 'ಶಬ್ದ ಮಾಲಿನ್ಯ ಸೇರಿದಂತೆ, ಹಲವು ಕಾರಣಗಳಿಂದ, ಶ್ರವಣ ದೋಷ ಅನುಭವಿಸುತ್ತಿದ್ದೇವೆ. ಕಿವುಡುತನವನ್ನು ಆರಂಭದಲ್ಲೇ ಗುರುತಿಸಿ, ಮುಂಜಾಗ್ರತೆವಹಿಸಿದರೆ, ಪರಿಹಾರ ಸಾಧ್ಯ. ಈ ಬಗ್ಗೆ, ಎಲ್ಲರಲ್ಲಿ ಜಾಗೃತಿ ಮೂಡಿಸೋಣ' ಎಂದು, ಮನವಿ ಮಾಡಿದ್ದಾರೆ.

<><><>

27 ಲಕ್ಷ ರೂಪಾಯಿ ಬಹುಮಾನದ, ಐ.ಟಿ.ಎಫ್. ಡಬ್ಲ್ಯೂ – 35 ದರ್ಜೆಯ, ಮಹಿಳಾ ವಿಶ್ವ ಪಂದ್ಯಾವಳಿಯ, ಮುಖ್ಯ ಸುತ್ತಿನ ಪಂದ್ಯಗಳಿಗೆ, ತೊಗರಿನಾಡು, ಕಲಬುರಗಿಯ, ಚಂದ್ರಶೇಖರ ಪಾಟೀಲ ಕ್ರೀಡಾಂಗಣ, ಸಜ್ಜಾಗಿದೆ. ಸಿಂಗಲ್ಸ್ ವಿಭಾಗದಲ್ಲಿ, 32 ಮತ್ತು ಡಬಲ್ಸ್‌ನಲ್ಲಿ 16 ಆಟಗಾರ್ತಿಯರು ಕಣದಲ್ಲಿದ್ದಾರೆ. ಈ ತಿಂಗಳ 8ನೇ ತಾರೀಖು, ಫೈನಲ್ ಪಂದ್ಯಗಳು ನಡೆಯಲಿವೆ. ಇಲ್ಲಿ ಪ್ರಶಸ್ತಿ ಜಯಿಸುವವರು, 35 ಡಬ್ಲ್ಯುಟಿ.ಓ. ರ‍್ಯಾಕಿಂಗ್ಸ್‌ಗೆ ಅಂಕ ಗಳಿಸಲಿದ್ದಾರೆ. ಅಗ್ರ ಶ್ರೇಯಾಂಕದ, ನೆದರ್‌ಲ್ಯಾಂಡ್ಸ್‌ನ ಯಾಸ್ಮಿನ್ ಜಿಂಬ್ರೆ ಅವರಿಗೆ, ಭಾರತದ ಐಶ್ವರ್ಯಾ ಜಾಧವ ಇಂದು, ಪ್ರಧಾನ ಸುತ್ತಿನಲ್ಲಿ ಸವಾಲೊಡ್ಡಲಿದ್ದಾರೆ. ಕರ್ನಾಟಕದ, ಸ್ನಿಗ್ಧಾ ಕಾಂತಾ ಹಾಗೂ ಹರ್ಷಿಣಿ ನಾಗರಾಜ, ಡಬಲ್ಸ್‌ನಲ್ಲಿ ಜೊತೆಯಾಗಿ, ಆಡಲಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.